ಸೆಲೆಬ್ರಿಟಿ

■ ಹನಿ

## ವೃದ್ಧೋಪದೇಶ!

'ಮಹಿಳೆಯರು ಬರೆದದ್ದನ್ನು ಅಲ್ಪಸ್ವಲ್ಪ ಓದುತ್ತೇನೆ. ಒಂದು ಅಥವಾ ಎರಡು ಪ್ಯಾರಾ ಓದಿದಾಗಲೇ ಇದು ಮಹಿಳೆಯರು ಬರೆದದ್ದೋ, ಅಲ್ಲವೋ ಎನ್ನುವುದು ನನಗೆ ಗೊತ್ತಾಗಿಬಿಡುತ್ತದೆ. ನನ್ನ ಲೆವೆಲ್‌ನ ಮಹಿಳಾ ಲೇಖಕಿಯರೇ ಇಲ್ಲ ಬಿಡಿ! ಜೇನ್ ಆಸ್ಟಿನ್ ಕೂಡಾ ನನ್ನ ಹತ್ತಿರಕ್ಕೇ ಬರಲ್ಲ. ಮಹಿಳಾ ಬರವಣಿಗೆ ವಿಭಿನ್ನ. ಅವರದ್ದು ಸೆಂಟಿಮೆಂಟಾಲಿಟಿಯ, ಸಂಕುಚಿತ ಜಗತ್ತು..'



–ಇದು 'ಇದೀಗ ಬದುಕಿರುವ ಇಂಗ್ಲಿಷ್ ಗದ್ಯದ ಅತಿದೊಡ್ಡ ಲೇಖಕ' ಎಂದು ಬಣ್ಣಿಸಲಾಗುವ ವಿ.ಎಸ್ .ನೈಪಾಲ್ ಅವರ ಅಭಿಪ್ರಾಯ. 'ದಿ ಗಾರ್ಡಿಯನ್'ಗೆ ನೀಡಿದ ಸಂದರ್ಶನದಲ್ಲಿ ನೈಪಾಲ್ ಹೀಗೆ ಹೇಳಿದ್ದಾರೆ ಎನ್ನುವುದೀಗ ಜಾಗತಿಕ ಖಂಡನೆಗೆ ಕಾರಣವಾಗಿದೆ. 15ಕ್ಕೂ ಹೆಚ್ಚು ಸೃಜನಶೀಲ ಕೃತಿಗಳು ಮತ್ತು 20ಕ್ಕೂ ಹೆಚ್ಚು ಗಂಭೀರ ಕೃತಿಗಳ ಮೂಲಕ 'ಬ್ರಿಟನ್ನಿನ ಅತಿ ದೊಡ್ಡ ಲೇಖಕ' ಎನ್ನಿಸಿಕೊಂಡಿರುವ ನೈಪಾಲ್ ಆಗಾಗ್ಗೆ ಇಂತಹ ಹೇಳಿಕೆಗಳನ್ನು ನೀಡಿ ವಿವಾದಕ್ಕೆ ಗುರಿ ಆಗುವುದಿದೆ. ಈಗ ಮಹಿಳೆಯರ ಬಗ್ಗೆ ಸಂಕುಚಿತ ಮನಸ್ಸಿನ ಮಾತನ್ನಾಡಿ ಮತ್ತೆ ಸುದ್ದಿ ಮಾಡಿದ್ದಾರೆ. ಪ್ರವಾಸ ಲೇಖನ ಮತ್ತು ಪ್ರಬಂಧಗಳಲ್ಲೂ ಎತ್ತಿದ ಕೈ ಆಗಿರುವ ನೈಪಾಲ್, 'ಬ್ರಿಟಿಶ್ ವಸಾಹತುಶಾಹಿ ಕಾದಂಬರಿಕಾರ' ಎಂದೇ ಹೆಸರು ಪಡೆದವರು. ಅವರ ಮೊದಲ ಪತ್ನಿ ಪ್ಯಾಟ್ರಿಕ್ ಹೇಲ್ ಕುರಿತು ಬಂದಿರುವ ಆತ್ಮಕಥೆಗಳ ಪ್ರಕಾರ– 'ನೈಪಾಲ್ ಹೆಣ್ಣುಬಾಕ! ಹೆಂಡತಿ ಇರುವಾಗಲೇ ಇನ್ನೊಬ್ಬಳ ಜತೆ ಸಂಬಂಧ ಇಟ್ಟುಕೊಂಡಿದ್ದಲ್ಲದೆ, ಆಗಾಗ್ಗೆ ವೇಶ್ಯಾಗೃಹಗಳಿಗೂ ಹೋಗಿ ಬರುತ್ತಿದ್ದ'ರಂತೆ! ಮೊದಲ ಪತ್ನಿ ಸತ್ತ ಬಳಿಕ ಪಾಕಿಸ್ತಾನದ ಮಾಜಿ ಪತ್ರಕರ್ತೆ ನಾದಿರಾರನ್ನು ಮದುವೆಯಾಗಿದ್ದಾರೆ. ಎರಡು ಸಲ ಡೈವೋರ್ಸ್ ಪಡೆದಿರುವ ಆಕೆಯದ್ದು ಇದು ಮೂರನೆ ಮದುವೆ.

ವೈಯಕ್ತಿಕ ಜೀವನದ ಕಥೆ ಏನೇ ಇರಲಿ, ಕಾದಂಬರಿಗಳಿಗಾಗಿ ನೈಪಾಲ್ ಗಳಿಸಿದ ಪ್ರಶಸ್ತಿಗಳೆಲ್ಲವೂ ತೂಕದ್ದೇ. ಸಾಮರ್‌ಸೆಟ್ ಮಾಮ್ ಪ್ರಶಸ್ತಿ, ಹಾಥರ್ಡೆನ್ ಪ್ರಶಸ್ತಿ, ಡಬ್ಲ್ಯು.ಎಚ್.ಸ್ಮಿಥ್ ಸಾಹಿತ್ಯ ಪ್ರಶಸ್ತಿ, ದಿ ಬೂಕರ್ ಪ್ರಶಸ್ತಿ, ದಿ ಜೆರುಸಲೇಂ ಪ್ರಶಸ್ತಿ, ಜೀವಮಾನದ ಸಾಧನೆಗೆ ಡೇವಿಡ್ ಕೊಹೆನ್ ಬಹುಮಾನ.. ಕೊನೆಗೆ 2001ರಲ್ಲಿ ನೋಬೆಲ್ ಸಾಹಿತ್ಯ ಪ್ರಶಸ್ತಿ– ಹೀಗೆ ಕೆಲವನ್ನು ಪಟ್ಟಿ ಮಾಡಬಹುದು. 'ದಿ ಟೈಮ್ಸ್' ಪತ್ರಿಕೆ '1945ರಿಂದ ಬ್ರಿಟನ್ನಿನ ಅತ್ಯಂತ ಶ್ರೇಷ್ಠ 50 ಲೇಖಕರ ಪಟ್ಟಿ' ಮಾಡಿದ್ದು ಅದರಲ್ಲಿ ನೈಪಾಲ್‌ಗೆ 7ನೆ ಸ್ಥಾನ ನೀಡಲಾಗಿದೆ.

'ನನಗೆ ಯಾವುದೇ ರಾಜಕೀಯ ಐಡಿಯಾಲಜಿ ಇಲ್ಲ' ಎಂದೇ ಹೇಳುವ ನೈಪಾಲ್, ಕಾಲಕಾಲಕ್ಕೆ ಬಲಪಂಥೀಯ ವಿಚಾರಗಳನ್ನು ಬೆಂಬಲಿಸುತ್ತಾ, ಎಡ ವಿಚಾರಧಾರೆಗಳನ್ನು ಟೀಕಿಸುತ್ತಾ ಬಂದವರು. ಮಹಿಳೆಯ ಕುರಿತ ಅವರ ಅನ್ನಿಸಿಕೆಗಳೂ ಅದಕ್ಕೆ ಪೂರಕವಾಗಿಯೇ ಇವೆ. ಮುಂದಿನ ವರ್ಷ 80 ತಲುಪುವ ನೈಪಾಲ್ (ಬರ್ತ್‌ಡೇ 17–8–32) ಈ ಇಳಿವಯಸ್ಸಿನಲ್ಲಿ ಹೇಳಿದ್ದನ್ನು ಗಂಭೀರವಾಗಿ ಏಕೆ ತಗೋಬೇಕು.. ಅಲ್ವೆ?





## ಲೀ ನಾ ವಿಕ್ರಮ!

ಕ್ರೀಡಾಂಗಣದಲ್ಲಿ ಚೀನೀ ಮಹಿಳೆಯರ ವಿಕ್ರಮ ಹೊಸತಲ್ಲ. ಆದರೆ 'ಯೂರೋಪಿಯನ್ನರು ಮತ್ತು ಅಮೆರಿಕನ್ನರ ವಸಾಹತು' ಎಂಬಂತಿರುವ ಟೆನಿಸ್‌ನಲ್ಲಿ ಚೀನೀ ಮಹಿಳೆಯೊಬ್ಬಳು ಏರಿರುವ ಎತ್ತರ ಇದೀಗ ಎಲ್ಲರ ಹುಬ್ಬು ಮೇಲೇರಿಸಿದೆ! ಈ ಎತ್ತರವನ್ನು ಸಾಧಿಸಿದಾಕೆ ಲೀ ನಾ! ಇದನ್ನು ಬರೆಯುವ ಹೊತ್ತಿಗೆ ಲೀ ನಾ ಫ್ರೆಂಚ್ ಓಪನ್ ಟೆನಿಸ್‌ನ ಫೈನಲ್ ತಲುಪಿಯಾಗಿದೆ. ಅದೂ ಜಗತ್ತಿನ 'ಪವರ್‌ಫುಲ್' ಆಟಗಾರ್ತಿ ಮರಿಯಾ ಶೆರಪೋವಾಳನ್ನು ನೇರ ಸೆಟ್‌ಗಳಲ್ಲಿ ಮಣಿಸಿ! ಲೀ ನಾ ಫೈನಲ್‌ನಲ್ಲಿ ಗೆದ್ದರೂ, ಸೋತರೂ ಅದೊಂದು ಹೊಸ ಇತಿಹಾಸವೇ!

29ರ ಹರೆಯದ ಲೀ ನಾ (ಬರ್ತ್‌ಡೇ 26–2–82) ಶೆರಪೋವಾರನ್ನು ಸೋಲಿಸುವಲ್ಲಿವರೆಗೆ ಬಂದು ತಲುಪಿದ್ದು ಏಕಾಏಕಿ ಸಾಧನೆಯಲ್ಲ. ಅದು ಕಳೆದ 10 ವರ್ಷಗಳಲ್ಲಿ ನಡೆಸಿದ ಕಠಿಣ ಪರಿಶ್ರಮಕ್ಕೆ ಸಂದ ಫಲ.

2004ರಲ್ಲಿ ಗಾಂಗ್‌ಜಾವ್‌ನಲ್ಲಿ ಮೊದಲ ಡಬ್ಲ್ಯುಟಿಎ ಸಿಂಗಲ್ಸ್ ಪ್ರಶಸ್ತಿ ಗೆದ್ದ ಲೀ ನಾ, 2006 ಮತ್ತು 2010ರಲ್ಲಿ ವಿಂಬಲ್ಡನ್‌ನ ಸಿಂಗಲ್ಸ್ ಕ್ವಾರ್ಟರ್ ಫೈನಲ್ ತಲುಪಿ ಪರಾಭವಗೊಂಡಿದ್ದಳು. 2009ರಲ್ಲಿ ಯುಎಸ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದಳು. 2006ರಲ್ಲಿ ವಿಶ್ವದ ಟಾಪ್ 20 ಆಟಗಾರ್ತಿಯರಲ್ಲಿ ಒಬ್ಬಳಾಗಿದ್ದ ಲೀ ನಾ, ಕಳೆದ ವರ್ಷ ಟಾಪ್ ಟೆನ್‌ಗೆ ಏರಿದ್ದಳು.

ಈ ವರ್ಷದ ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್‌ನಲ್ಲೂ ಫೈನಲ್ ತಲುಪಿ ಸೋತಿದ್ದ ಲೀ ನಾ, ಈಗ ಚೀನಾದಲ್ಲಿ ಮನೆಮಾತು. ಟೆನಿಸ್‌ನಲ್ಲಿ ಈ ಹಿಂದೆ 2004ರಲ್ಲಿ ಒಲಿಂಪಿಕ್ ಡಬಲ್ಸ್ ಸ್ವರ್ಣ ಗೆದ್ದದ್ದಷ್ಟೇ ಚೀನಾದ ದೊಡ್ಡ ದಾಖಲೆ. ಸದ್ಯಕ್ಕೆ ವಿಶ್ವದ ನಂಬರ್ 7 ಆಟಗಾರ್ತಿಯಾಗಿರುವ ಲೀ ನಾ, ಚೀನಾದ ಹೆಮ್ಮೆಯನ್ನು ಇನ್ನಷ್ಟು ವಿಸ್ತರಿಸಿದ್ದಾಳೆ. '29 ದೊಡ್ಡ ವಯಸ್ಸೇನಲ್ಲ; ಇನ್ನೂ 2 ವರ್ಷ ಚೆನ್ನಾಗಿ ಆಡ್ತೀನಿ' ಎಂದಿರುವುದು ಈಕೆಯ ಆತ್ಮವಿಶ್ವಾಸದ ಪ್ರತೀಕ!


Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008,


©All rights reserved. Reproduction in whole or in part without permission is prohibited.


RNI No 7891/65